ಒ ಎಸ್ 83/2024 ಪಿ.ಡಬ್ಲ್ಯೂ

ಇಂದು ದಿಃ 10.09.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು 10ನೇ ತರಗತಿ ಓದಿದ್ದೇನೆ. ನಾನು ಹೈನುಗಾರಿಕೆ ಅಂದರೆ ಹಸು ಸಾಕಾಣೆ ಮಾಡುತ್ತೇನೆ. ನಾನು 4 ಜರ್ಸಿ ದನಗಳನ್ನು ಸಾಕುತ್ತಿದ್ದೇನೆ. ಪರವಾನಿಗೆ ಇದ್ದು ಹೈನುಗಾರಿಕೆ ಮಾಡುತ್ತಿಲ್ಲ. ಒಂದು ಹಸುವಿನಲ್ಲಿ 5-6 ಲೀಟರ್ ಹಾಲು ಬರುತ್ತದೆ. ನನಗೆ ಹೈನುಗಾರಿಕೆಯಿಂದ ಮಾಸಿಕ ರೂ. 30000/- ಸಂಪಾದನೆ ಇದೆ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ. ಹಸುಗಳನ್ನು ನಾನೇ ಖರೀದಿಸಿದ್ದೇನೆ. ನನಗೆ ಮದುವೆಯಾಗಿದೆ. ನಾನು ನನ್ನ ತಂದೆ ತಾಯಿ ಜೊತೆಗೆ ವಾಸ ಇದ್ದೇನೆ. 4 ಹಸುಗಳು ನನ್ನ ತಂದೆಯಾಗಿದ್ದು ಅವುಗಳನ್ನು ನಾನು ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿ.

ಪ್ರತಿವಾದಿ ನಮ್ಮ ಮನೆಯ ಪಕ್ಕ ಲೇಔಟ್ ನಲ್ಲಿದ್ದಾರೆ ಹಾಗಾಗಿ ಪರಿಚಯ. ನಾನು ದೇವೀರಮ್ಮನಹಳ್ಳಿಯಲ್ಲಿ ವಾಸ ಇದ್ದೇನೆ. ಪ್ರತಿವಾದಿ 15 ವರ್ಷಗಳಿಂದ ಪರಿಚಯ. 15 ವರ್ಷದ ಅವದಿಯ ಪರಿಚಯದಲ್ಲಿ ಅವರ ಜೊತೆ ವ್ಯವಹಾರ ಮಾಡಿದ್ದೀರಾ ಎಂದರೆ ಹಣ ಕೇಳಿದ ಕಾರಣ ಕೊಟ್ಟಿದ್ದೆ ಎನ್ನುತ್ತಾರೆ. ಹಣಕಾಸಿನ ಬಿಕ್ಕಟು ಇದೆ ಸ್ವಲ್ಪ ಹಣ ಸಹಾಯ ಮಾಡಿ ಎಂದು ಕೇಳಿದ್ದರು, ಮೊದಲು ನಾನು ಕೊಡುವುದಿಲ್ಲ ಎಂದು ಹೇಳಿದ್ದೆ ಆದರೂ ಸಹಾಯ ಮಾಡಲು ಹಣ ಕೊಟ್ಟಿದ್ದೆ.

ನನ್ನ ಮತ್ತು ಪ್ರತಿವಾದಿ ನಡುವೆ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ರಾಜು. ಅವರನ್ನು ರಾಜಣ್ಣ ಎಂದು ಕರೆಯುವುದಿಲ್ಲ. ನನ್ನ ತಂದೆ ಹಾಗೂ ಪ್ರತಿವಾದಿಗೆ ಗೆಳೆತನವಿದೆ ಎಂದರೆ ಸರಿ. ನನ್ನ ತಂದೆ ಮತ್ತು ಪ್ರತಿವಾದಿಗೆ ಒಂದು ಹಣಕಾಸಿನ ವ್ಯವಹಾರ ನಡೆದಿತ್ತು ಎಂದರೆ ಸುಳ್ಳು. ಆ ವಿಚಾರದಲ್ಲಿ ನನ್ನ ತಂದೆ ಒ ಎಸ್ 105/2022ಅನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣ ಮದ್ಯಸ್ಥಿಕ ರಾಜಿ ಮೂಲಕ ಮುಕ್ತಾಯ ಆಯಿತು ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ಭದ್ರತೆಗೆಂದು ಕೊಟ್ಟಿದ್ದ ಪತ್ರವನ್ನು ಕೊಡುತ್ತೇನೆ ಎಂದು ಹೇಳಿ ಕೊಡದೆ ನನ್ನ ಬಳಿ ಇಟ್ಟುಕೊಂಡಿದ್ದೆ ಎಂದರೆ ಸುಳ್ಳು. ಆ ಆಧಾರ ಪತ್ರದ ಆಧಾರದಲ್ಲಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸುಳ್ಳು. ನಾನು ಪ್ರತಿವಾದಿಗೆ ರೂ 5 ಲಕ್ಷವನ್ನು ನಗದು ರೂಪದಲ್ಲಿ ದಿ. 18.03.2015ರಂದು ಕೊಟ್ಟಿದ್ದೆ. ಎಲ್ಲಾ ನೋಟುಗಳು ರೂ 500 ರ ಮುಖಬೆಲೆಯ ನೋಟುಗಳಾಗಿದ್ದು 10 ನೋಟುಗಳನ್ನು ಕೊಟ್ಟಿದ್ದೆ. ಸ್ವಲ್ಪ ಸ್ವಲ್ಪ ಹಣವನ್ನು ಮನೆಯಲ್ಲಿ ಇಟ್ಟುಕೊಂಡು ರೂ 5ಲಕ್ಷವನ್ನು ಕೂಡಿಸಿ ಇಟ್ಟಿದ್ದೆ. ಸಂಪೂರ್ಣ ಮನೆಯ ಜವಾಬ್ದಾರಿಯನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದು ಅದರಲ್ಲಿ ನಾನು ಸದಸ್ಯನಾಗಿದ್ದು ಯಾವುದೇ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನನ್ನ ತಂದೆಯವರು ನನ್ನ

ಮೂಲಕ ಹಾಕಿಸಿದ್ದಾರೆ ಎಂದರೆ ಸುಳ್ಳು. ರೂ 5 ಲಕ್ಷ ಹಣ ಕೊಟ್ಟಾಗ ಸಿದ್ದರಾಜು ಮತ್ತು ರಾಜಪ್ಪ ಎನ್ನುವ ಸಾಕ್ಷಿ ಇದ್ದರು. ಸಿದ್ದರಾಜು ನಂಜನಗೂಡು ವಾಸಿಯಾಗಿದ್ದು ಅವರು ನನಗೆ ಗೊತ್ತಿರುತ್ತಾರೆ. ರಾಜಪ್ಪ ಎಲ್ಲಿಯವರೆಂದು ನನಗೆ ಗೊತ್ತಿಲ್ಲ. ಪತ್ರವನ್ನು ನಾನೇ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಮಾಡಿಸಿದ್ದೆ. ಪತ್ರ ಮಾಡಿಸಿದಾಗ ಸಿದ್ದರಾಜು, ನಾನು ಮತ್ತು ಪ್ರತಿವಾದಿ ಇದ್ದೆವು. ನಾನು ಪತ್ರವನ್ನು ಮಾಡಿಸಿಲ್ಲ, ನನ್ನ ತಂದೆಯ ಚಿತಾವಣೆ ಮೇರೆಗೆ ಈ ದಾವೆ ದಾಖಲಿಸಿದ್ದೇನೆ ಎಂದರೆ ಸುಳ್ಳು. ಈ ಹಿಂದಿನ ದಾವೆಯಲ್ಲಿ ಬರಬೇಕಾದ ಹಣ ಕೊಟ್ಟಾಗಿದ್ದು, ಪ್ರತಿವಾದಿಯಿಂದ ಹಣ ಬರಬೇಕಾಗಿಲ್ಲ ಎಂದರೆ ಅದು ಸುಳ್ಳು. ನನಗೆ ಯಾವುದೇ ಆರ್ಥಿಕ ಮೂಲಗಳಿಲ್ಲ, ದನ ಮೇಯಿಸಿಕೊಂಡು ಇದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ 35 ವರ್ಷ ಪ್ರಾಯ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.